ಶ್ರೀ ಕೆ. ಕಂಶಾಲ.—ತರಬೇತಿ ಕೊಟ್ಟವರಿಗೇ ತರಬೇತಿ ಕೊಡುತ್ತಿದ್ದಾರೆ. ಆದ್ದರಿಂದ ಕೇಂದ್ರ ವನ್ನು ವಿತಕ್ಕೆ ಪರ್ಗಾವಣೆ ಮಾಡಬಾರದು ?

ಶ್ರೀ ಜೆ. ಬಸವಣ್ಣಪ್ಪ.—ತರಬೇತಿ ಕೊಟ್ಟವರಿಗೇ ಕೊಡುತ್ತಿದ್ದಾರೆ ಎಂಬುದು ಸತ್ಯಕ್ಕೆ ದೂರ ವಾದ ಮಾತು. ಜಿಲ್ಲೆಯ ಎಲ್ಲ ಭಾಗಗಳಲ್ಲಿರತಕ್ಕ ಎಲಿಜಿಬಲ್ ಕ್ಯಾಂಡಿಡೇಟ್ಸ್‌ಗೆ ಅವಕಾಶ ಕೊಡುವುದಕ್ಕೆ ಸೂಕ್ತ ಆದೇಶ ಕೊಡುವುದಲ್ಲದೆ ಹೊರಗಡೆಯಿಂದ ಬಂದವರಿಗೆ ವಸತಿ ಸೌಲಭ್ಯಕ್ಕೂ ಅವಕಾಶ ಮಾಡಿಕೊಡಲಾಗುವುದು.

ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿರುವವರಿಗೆ ಹಕ್ಕು ಪತ್ರ ನೀಡುವ ಬಗ್ಗೆ.

೧೧೦೭. ವಸಂತ ವಿ. ಸಾಲಿಯಾನ(ಕಾಪು).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ೩ ಸೆಂಟ್ಸ್, ೫ ಸೆಂಟ್ಸ್ ಗಳಷ್ಟು ಸರಕಾರಿ ಜಾಗದಲ್ಲಿ ಸಣ್ಣ ಗುಡಿಸಲು ಕಟ್ಟಿ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ?

ಆ) ಅವರಿಗೆ ಹಕ್ಕು ಪತ್ರಗಳನ್ನು ನೀಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಕಳೆದ ಮೂರು ವರ್ಷಗಳಲ್ಲಿ ಕಾಪು ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ೩೧೭.

ಆ) ಆ ೩೧೭ ಜನರ ಪೈಕಿ ೨೦೮ ಮಂದಿ ನಿವೇಶನ ರಹಿತರಿಗೆ ಈಗಾಗಲೇ ಹಕ್ಕು ಪತ್ರ ನೀಡ ಲಾಗಿದೆ ಉಳಿದ ೧೦೯ ಜನರಿಗೆ ಮನೆ ನಿವೇಶನ ನೀಡುವುದಕ್ಕೆ ಕ್ರಮ ತೆಗೆದುಕೊಳ್ಳ ಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ.—ಸನ್ಮಾನ್ಯ ಅಧ್ಯಕ್ಷರೆ, ಕೆಲವು ಸಂದರ್ಭದಲ್ಲಿ ವಿನಾಗಂತ್ತಿದೆ ಯೆಂದರೆ ಅರ್ಜಿಗಳು ವಿಲೇಜ್ ಅಕೌಂಟೆಂಟ್, ಮತ್ತೆ ರೆವಿನ್ಯೂ ಇನ್‌ಸ್ಪೆಕ್ಟರ್ ಮಂತ್ರಿ ತಹಸೀಲ್ದಾರರ ಹತ್ತಿರ ಇರುತ್ತದೆ. ಇದರಲ್ಲಿ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಸಾಧ್ಯವಾದ ಮಟ್ಟಿಗೆ ಇದು ಸರಿ ಯಾಗಿದೆ. ೧೯೭೪ನೇ ಇಸವಿಯಿಂದ ಕೆಲವು ಅರ್ಜಿಗಳು ಸುಮಾರು ೧೦೦ಕ್ಕಿಂತ ಹೆಚ್ಚು ಅರ್ಜಿಗಳು ಪೆಂಡಿಂಗ್ ಇವೆ. ಅವರು ಕೃಷಿ ಮಾಡಿಕೊಂಡು ತೆಂಗಿನಮರ ಎಲ್ಲಾ ಇಟ್ಟಿದ್ದಾರೆ. ೧೯೭೪ನೇ ಇಸವಿ ಯಿಂದ ಇದ್ದುಕೊಂಡು ಸರ್ಕಾರದ ಗಮನಕ್ಕೆ ತಂದರೂ ಕೂಡ ಹಕ್ಕುಪತ್ರಗಳನ್ನು ಯಾರಿಗೆ ಕೊಡ ಲಿಲ್ಲವೋ ಅಂಥವರಿಗೆ ದಯವಿಟ್ಟು ಕೊಡಬೇಕು. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿ ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೪ ರಿಂದ ಅರ್ಜಿ ಉಳಿಯಬಾರದಿತ್ತು. ಉಳಿದಿದ್ದರೆ ಕೂಡಲೇ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ ೪೦೦ (ಲಿಖಿತ) ಸದಸ್ಯರು ಹಾಜರಿರಲಿಲ್ಲ.

ಕರ್ನಾಟಕ ಅಲ್ಪ ಸಂಖ್ಯಾತರ ಹಣಕಾಸು ನಿಗಮ

೧೩೪೪. ಶ್ರೀ ಮೊಹಮ್ಮದ್ ಲೇಕ್ಕುದ್ದೀನ್ (ಬೀದರ್).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಅಲ್ಪ ಸಂಖ್ಯಾಂತರ ಹಣಕಾಸು ನಿಗಮಕ್ಕೆ ಸರ್ಕಾರದವರು ಒಂದು ಕೋಟಿ ರೂ. ಮೂಲ ಧನವನ್ನು ಕೊಡಲು ಒಪ್ಪಿದ್ದು ಈ ಮೊತ್ತ ಬಿಡುಗಡೆ ಮಾಡಿಲ್ಲದಿರುವುದಿಲ್ಲ ಎನ್ನುವುದು ವಾಸ್ತವಿಕವಾಗಿಲ್ಲವೇ, ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು.

ಅ) ನಿಗಮದ ಸರಿಯಾದ ಕಾರ್ಯ ನಡೆಸಲು ಸಿಬ್ಬಂದಿ ವರ್ಗಗಳನ್ನೊಳಗೊಂಡಂ ಅನುಕೂಲತೆಗಳನ್ನು ಒದಗಿಸಿರುವರೆ ?

ಇ) ಹಾಗಿದ್ದಲ್ಲಿ ಪ್ರಾರಂಭದಿಂದಲೂ ಕೊಟ್ಟಿರುವ ಸಿಬ್ಬಂದಿ ?

ಈ) ನಿಗಮದಿಂದ ಎಷ್ಟು ಜನರು ಪ್ರಯೋಜನ ಹೊಂದಿರುತ್ತಾರೆ, ಹಾಗೂ ಯಾವ ಸ್ವರೂಪದ ಸಹಾಯ ನೀಡಿರುತ್ತದೆ.

ಶ್ರೀ ಜಿ. ಬಸವಣ್ಣಪ್ಪ(ಸಮಾಜ ಕಲ್ಯಾಣ ಸಚಿವರು).—

ಅ) ಹಾದು, ನಿಗಮಕ್ಕೆ ಸರ್ಕಾರವು ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಎಲ್ ೬೮ ಬಿಸಿಎ ೮೫ ದಿನಾಂಕ ೨೬-೩-೧೯೮೬.

ಆ) ಹೌದು.

ಇ) ನಿಗಮದ ಸಂಘಗಳ ನಿಯಮಗಳ ೧೪ನೇ ನಿಯಮದ ಪ್ರಕಾರ ಸರ್ಕಾರವು ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಿದೆ, ಮತ್ತು ೧೬(೫)ನೇ ನಿಯಮದ ಪ್ರಕಾರ ನಿಗಮವು ಕೆಳಕಾಣಿಸಿರುವ ಸಹಾಯಕ ಸಿಬ್ಬಂಧಿಯನ್ನು ನೇಮಿಸಿಕೊಂಡಿದೆ.

೧. ಕಂಪನಿ ಕಾರ್ಯದರ್ಶಿ	೧
೨. ಅಕೌಂಟ್ಸ್ ಸೂಪರಿಂಟೆಂಡೆಂಟ್	೧
೩. ಶೀಘ್ರಲಿಪಿಗಾರರು	೨
೪. ಪ್ರಥಮದರ್ಜೆ ಗುಮಾಸ್ತರು	೪
೫. ವಾಹನ ಚಾಲಕರು	೨
೬. ಜವಾನರು	೨
೭. ಸೈಕಲ್ ಆರ್ಡರ್ಲಿ.	೧

ಈ) ನಿಗಮದ ಯೋಜನೆಗಳಡಿಯಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಮತ್ತು ಅವರಿಗೆ ನೀಡಲಾದ ಸಹಾಯ ಈ ಕೆಳಕಂಡಂತಿದೆ.

ಯೋಜನೆಗಳು	ನೀಡಿರುವ ಸಹಾಯ	ಫಲಾನುಭವಿಗಳ ಸಂಖ್ಯೆ
೧. ಸ್ವಾವಲಂಭನ ಸಾಲ ಯೋಜನೆ ಯಡಿಯಲ್ಲಿ ಸಾಲ ನೀಡಿಕೆ	ರೂ. ೮೯,೦೭೬-೦೦	೩೧
೨. ವಾಹನ ಚಾಲನಾ ತರಬೇತಿಗಾಗಿ	ರೂ. ೧೫,೦೦೦-೦೦	೧೫

SRI LAIKUDDIN BURANUDDIN.—Mr. Speaker Sir, the sad aspect of this Corporation is that the Chairman of this Corporation has no powers to sanction applications and the loan applications have to be approved by the District Officers belonging to the Industries Department and the Backward Classes Department. What is the purpose of the constitution of this Corporation when they are not having any powers to sanction loan applications ? Secondly, only 37 persons have been issued loans and it is not known whether these 37 persons have received the full amount of loan from banks because the Corporation is providing only 5-20% seed money for starting industries. Thirdly, only 15 persons are selected for motor driving training scheme. In other words, only 37 and 15 persons belonging to minorities are selected for these above two courses in the entire

State. Therefore, the very purpose of constituting such a corporation is frustrated. There is no help at all from the Government side. During the entire period of 2 years, they have provided seed money only for 37 and 15 persons in different courses. whether the prupose of setting up of this Corporation is to produce only drivers from among minorities ? I request the Government not to use the Corporation as a propoganda machinery. It should become a living institution. Simply setting up a corporation will not serve the purpose of minorities. There should be a concrete proposal to uplift them. I want to know how many persons have received loans from each district and the names of the beneficiaries. Another fact is, the minority Corporation should have exclusively members belonging to minority community. If you appoint persons other than minority community they will not be knowing the plight of minority communities.

SRI G. BASAVANNAPPA.— Sir, the Minorities Corporation was established in the year 1986. The Chairman was appointed on 28th July 1986 and the Board was constituted on 19-12-1986. The Chairman of the Corporation is Mr. Kalimulla Khan, the hon. Members are as follows. 1. M. D'Souza, Mangalore, 2. Ziaulla Shariff, Mysore, 3. Md.Jahiruddin, Shirahatti of Shikaripur 4. Jabbar Khan, Honnali and 5. Sri Veerendra Hegde of Dharmasthala. As I said, the Corporation has started recently and immediately when they have started their activities they have submitted three schemes for the upliftment of minorities. They are 1. Swavalambana margin money scheme, 2. Motor Driving Scheme and 3. Electrification of minorities houses scheme. Then, the Government ordered the approval for the first two schemes. Immediately after the approval of schemes about 19,150 applications were distributed and seed money of Rs. 30 lakhs was released. These beneficiaries are going to benefit in the current year itself. With regard to second scheme, we have released Rs. 8.75 lakhs. They will be selected in the age group of 18 and 35.

SRI LAIKUDDIN BURANUDDIN.—My question is, they do not have powers to sanction loan. Only applications are forwarded from them to aistrict officials belonging to Industries and Backward Classes department. They are processed by them at the district level and sent back to the Corporation Secondly, how many industries and crafts have been proposed by the Corporation and out of them, how many industries and crafts are approved by the Government for the purpose of obtaining loan ?

SRI G. BASAVANNAPPA.—The Minority Corporation Chairman and Board members enjoy powers. But we don't have branch offices at

the district level. Just to lessen the procedure, we have constituted a Committee under the Chairmanship of the Deputy Commissioner so as to give immediate relief to the minorities. The Committee headed by Deputy Commissioner will process the applications and submit the same to the Head Office.

For the second question, about three hundred and odd industries have been proposed to be taken up and those schemes have been approved.

ಕಡಿಮೆ ಮೌಲ್ಯದ ಭಾಪಕಾಗದಗಳು ದೊರಕದಿರುವುದು

೧೧೧೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕ ತಿಂಗಳುಗಳಿಂದ ರಾಜ್ಯದಲ್ಲಿ ಕಡಿಮೆ ಮೌಲ್ಯದ ಭಾಪಾ ಕಾಗದಗಳು ಸರಿಯಾಗಿ ಸರಬರಾಜು ಆಗದಿರಲು ಕಾರಣವೇನು ?

ಆ) ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಸರಬರಾಜಿನಲ್ಲಿ ಸಹ ಅವಶ್ಯಕತೆಯ ಅಧ್ಯತೆಯನ್ನು ಅನುಸರಿಸಲಾಗುವುದೇ ?

ಈ) ಎಲ್ಲಾ ಉಪ ಖಜಾನೆಗಳಲ್ಲಿ ಫ್ರಾಂಕಿಂಗ್ ಯಂತ್ರಗಳನ್ನು ಒದಗಿಸುವುದು ಹಾಗೂ ಬರವಣಿಗೆ ಮೊದಲು ಫ್ರಾಂಕಿಂಗ್ ಮಾಡಿಸುವುದು ಉತ್ತಮವೆಂಬುದು. ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಕಡಿಮೆ ಮೌಲ್ಯದ ಭಾಪಾ ಕಾಗದಗಳು ಕೇಂದ್ರ ಮುದ್ರಾಂಕ ಭಂಡಾರ ನಾಸಿಕ್‌ದಿಂದ ಸಾಕಷ್ಟು ಸರಬರಾಜು ಆಗದಿರುವುದೇ ಕಾರಣವಾಗಿದೆ;

ಆ) ಕೇಂದ್ರ ಮುದ್ರಾಂಕ ಭಂಡಾರ ನಾಸಿಕ್ ಇವರನ್ನು ಪದೇ ಪದೇ ಸಂಪರ್ಕಿಸಿ ಅಧ್ಯತೆಯ ಮೇರೆಗೆ ಕಡಿಮೆ ಮೌಲ್ಯದ ಸಾಕಷ್ಟು ಭಾಪಾ ಕಾಗದಗಳನ್ನು ಸರಬರಾಜು ಮಾಡಲು ಕೋರಲಾಗಿದೆ.

ಇ) ಹೌದು.

ಈ) ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ಕೇಂದ್ರ ಮುದ್ರಾಂಕ ಭಂಡಾರದಿಂದ ಬರುವ ಭಾಪಾ ಕಾಗದಗಳ ವಿತರಣೆ ಅಸಮರ್ಪಕವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿರುತ್ತದೆ. ನಮ್ಮ ಕಂದಾಯ ಪುರದಲ್ಲಿ ಸಹ. ಮೌಲ್ಯದ ಭಾಪಾಕಾಗದಗಳಿಗೆ ಕಳೆದ ೨ ವರ್ಷಗಳಿಂದ ಬಹಳ ಬೇಡಿಕೆ ಇದೆ. ಆದರೆ ಅವು ಅಲ್ಲಿ ಲಭ್ಯವಾಗುತ್ತಿಲ್ಲ ಭಟ್ಕಳ, ಹೊನ್ನಾವರ, ಕುಮಟಾದಲ್ಲಿ ಇವು ಹೇರಳವಾಗಿ ದೊರಕುತ್ತಿದ್ದು ಅವನ್ನು ಇಲ್ಲಿಗೆ ತಂದು ೨೦-೩೦-೫೦ ರೂಪಾಯಿ ಬೆಲೆಗೆ ಕಾಳಸಂತೆಯಲ್ಲಿ ಮಾರಲಾಗುತ್ತಿದೆ. ಇವು ಜಿಲ್ಲೆಯ ಒಂದು ಭಾಗದಲ್ಲಿ ಸಮರ್ಪಕವಾಗಿ ಸಿಗುತ್ತಿದ್ದು, ಇನ್ನೊಂದು ಜಾಗದಲ್ಲಿ ಸಿಗದೇ ಇರುವುದಕ್ಕೆ ಕಾರಣ ಏನು ? ಈಗ ಫ್ರಾಂಕಿಂಗ್ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದು ಆರ್ಡಿನರಿ ಕಾಗದದ ಮೇಲೆ ಬರೆದುಕೊಂಡು ಮಂಗಳೂರಿಗೆ ಹೋಗಿ ಡಿಸ್ಟ್ರಿಕ್ಟ್‌ಟ್ರೆಸರಿಯಲ್ಲಿ ಮಂಜೂರು ಮಾಡಿಸಿಕೊಂಡು ಬರಬೇಕಿದ್ದು, ಅಲ್ಲಿಗೆ ಹೋಗಿಬರಲು ೨೫ ರೂ. ಖರ್ಚುಆಗುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನು ಉಪವಿಭಾಗ ಮಟ್ಟಕ್ಕೂ ಪ್ರತಿ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲೂ ವಿಸ್ತರಿಸಲು ಯೋಚನೆ ಇದೆಯೇ ?